# ಕಾನನ


**JULY 2013**

ನಿಸರ್ಗದೆಡೆಗೆ ಪಯಣ



BANNERUGHATTA

**WILDLIFE CONSERVATION GROUP**



# ಕಾನನ

JULY 2013

ನಿಸರ್ಗದೆಡೆಗೆ ಪಯಣ

* ಕುರುಡರು ಕಂಡ ಆನೆ
* ಹಕ್ಕಿಲೋಕ
* ಎ ಎ ಅಂಕಣ
* ಗೀಜುಗನ ಗೂಡು (ಕವನ)

ಸಂಪಾದಕರು : ಅಶ್ವಥ ಕೆ.ಎನ್ ವಿನ್ಯಾಸ : ನಾಗೇಶ್ ಓ.ಎಸ್

ಲೇಖಕ ವೃಂದ : ಸ್ವಾಮಿ ಸೌಖ್ಯಾನಂದಜೀ ಮಹಾರಾಜ್, ಅಶ್ವಥ.ಕೆ.ಎನ್, ಶಂಕರಪ್ಪ.ಕೆ.ಪಿ, ಕೃಷ್ಣ ನಾಯಕ್,

ಕರಡು ತಿದ್ದುಪಡಿ : ಮುರಳಿ.ಎಸ್

ಮುಖಪುಟ : ಸೂರ್ಯನ ಕುದುರೆ

E-mail : kaanana.mag@gmail.com



# ಸಂಪಾದಕೀಯ

ಎಲ್ಲೆಡೆ ಮಳೆಯಾಗುತ್ತಿದೆ, ಅಣೆಕಟ್ಟುಗಳು, ಕೆರೆಗಳು, ಕುಂಟೆಗಳು ತುಂಬುತ್ತಿವೆ. ಹಸನಾಗಿರುವ ಹೊಲಗಳಿಗೆ ಬೀಜವನ್ನು ತನ್ನೊಡಲಲ್ಲಿ ಹುದುಗಿಸಿಕೊಳ್ಳುವ ತವಕದಿಂದ ಮಣ್ಣು ಹಸಿಯಾಗಿದೆ. ಹಸಿ ಮಣ್ಣಿನ ಘಮ, ಗಾಳಿಯನ್ನೆಲ್ಲ ಆವರಿಸಿದೆ.


ತಣ್ಣನೆಯ ವಾತಾವರಣ ಜಿನಿ ಜಿನಿ ಮಳೆಹನಿಗಳು ಹಸಿರ ಹುಲ್ಲುಮೇಲೆ ಕೇಕೆ ಹಾಕಿ ಕುಳಿತಿವೆ, ಬೀಜ ಮೊಳಕೆ ಒಡೆಯಲು ಇದು ಸಕಾಲ. ಜನರ ಅನ್ನ ಬೀಜ ರೂಪವಾಗಿ ಸಡ್ಡಿಗೆಯಲ್ಲಿ ಕೂರುಗೆಯಲ್ಲಿ ಭೂಮಾತೆಯ ಒಡಲಿಗೆ ಸೇರಿ ತಯಾರಾಗುತ್ತಿದೆ. ರೈತರ ಮನೆಗಳಲ್ಲಿ ಈಗ ಬಿಡುವಿಲ್ಲದ ಕೆಲಸ, ಯೋಗಿಯ ಹಾಗೆ ಬೇರೆಲ್ಲಾ ಕೆಲಸವನ್ನು ಬದಿಗಿರಿಸಿ ಬಿತ್ತನೆಯಲ್ಲಿ ತೊಡಗಿದ್ದಾನೆ ನಮ್ಮ ರೈತ.

"ಕಾಡು ಬೆಳೆಸುವ ವೀರರಿಗೆ ಗಿಡ ನೆಡಲು ಇದು ಪ್ರಶಸ್ತ ಕಾಲ *ಮಣ್ಣಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ,* ನೀನು ನೆಟ್ಟ ಗಿಡ ಎಂದೂ ಹುಸಿಯಾಗದು."

ಗುರುತ್ವ ಬಲವನ್ನು ಮೀರಿ ಆಕಾಶದೆಡೆಗೆ ಬೆಳೆಯುವ ತಾಕತ್ತು ಬೀಜಕ್ಕಿರುವಂತೆ. ಕಾಡುಕಟ್ಟುವ ಹುಮ್ಮಸ್ಸು ಉದಯಿಸಲಿ ನಿಮಗೂ.............!

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.






# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು


### * ಕುರಡರು ಕಂಡ ಆನೆ

ಅಲ್ಪ ಜ್ಞಾನಿಗೂ ಪೂರ್ಣ ಜ್ಞಾನಿಗೂ ಇರುವ ವ್ಯತ್ಯಾಸವೇನು? ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹ ಎಲ್ಲವನ್ನೂ ಚೆನ್ನಾಗಿ ತಿಳಿದ ಜ್ಞಾನಿಗಳು, ವಿದ್ಯಾವಂತರು, ಇದ್ದಾರೆ. ಇಂತವರ ಸಂಖ್ಯೆ ಬಹಳ ಕಡಿಮೆ, ಇವರು ಎಲ್ಲವನ್ನೂ ತಿಳಿದಿದ್ದರೂ ಸಹ ಬಹಳ ಸರಳ, ನೇರ ನುಡಿಯವರು ತೆರೆದಿಟ್ಟ ಪುಸ್ತಕದಂತಿರುತ್ತಾರೆ. ಇನ್ನೊಂದು ವರ್ಗದವರಿದ್ದಾರೆ ಅಲ್ಪಜನರು. ತಿಳಿದಿರುವುದೇ ಸ್ವಲ್ಪ ಆದರೆ ಅವರ ನಡೆ ನುಡಿ ತಿಳಿದವರಿಗಿಂತ ಹೆಚ್ಚು. ಅದಕ್ಕೆಂದೇ ಕಾಣುತ್ತದೆ *'ಅಲ್ಪ ಜ್ಞಾನಿ ಮಹಾ ಗರ್ವ* ಎಂದು ಇದನ್ನು ಶ್ರೀ ರಾಮಕೃಷ್ಣರು ಬಹಳ ಸ್ವಾರಸ್ಯಕರವಾಗಿ ತಿಳಿಸಿದ್ದಾರೆ.

ಒಂದು ಊರು ಆ ಊರಿಗೆ ಸರ್ಕಸ್ ಬಂದಿತ್ತು ಅದರ ಜೊತೆಗೆ ಒಂದು ಆನೆಯು ಸಹ ಬಂದಿತ್ತು. ನಾಲ್ಕೈದು ಜನ ಕುರುಡರು ಆನೆ ಬಂದಿರುವ ಸುದ್ದಿಯನ್ನು ಕೇಳಿ ತಾವೂ ಸಹ ಆನೆ ನೋಡ ಬಯಸಿ, ಹಿರಿಯರಿಗೆ ಹೇಳಿದಾಗ ಹಿರಿಯರೊಬ್ಬರು ಆ ನಾಲ್ಕೈದು ಜನ ಕುರುಡರನ್ನು ಸಹ ಸರ್ಕಸ್ಸಿನ ಬಳಿ ಕರೆದೊಯ್ಯುದು ಆನೆ ಬಳಿ ಬಿಟ್ಟರು. ಕುರುಡರಿಗೆ ಜ್ಞಾನ ತಿಳಿಯುವುದು ಕೇಳುವುದರಿಂದ ಅಥವ ಸ್ಪರ್ಷದಿಂದ ಮಾತ್ರ. ಆದ್ದರಿಂದ ಆನೆಯನ್ನು ನೋಡಲು ಬಂದ ಕುರುಡರು ಆನೆಯ ಬಳಿ ಹೋಗಿ ಒಬ್ಬೊಬ್ಬರು ಒಂದೊಂದು ಆನೆಯ ಭಾಗವನ್ನು ಸ್ಪರ್ಶಿಸಿ ನೋಡಿ ಆನಂದಿಸಿದರು. ಕೊನೆಗೆ ಮನೆಗೆ ಮರಳಿ ಬರುವಾಗ ಆನೆಯ ಬಗ್ಗೆ ಚರ್ಚೆ ನಡೆಯಿತು. ಒಬ್ಬ ಹೇಳಿದ ಆನೆ ಕಲ್ಲಿನ ಕಂಬದ ಹಾಗೆ ಇದೆ ಎಂದು, ಏಕೆಂದರೆ ಅವನು ಮುಟ್ಟಿದ್ದು ಆನೆಯ ಕಾಲನ್ನು. ಆನೆಯ ಬಾಲ ಹಿಡಿದವನು ಹೇಳಿದ, ಆನೆ ಬಾರುಕೋಲಿನ ಹಾಗೆ ಇದೆ ಎಂದು. ಹೊಟ್ಟೆ ಮುಟ್ಟಿದವ ಹೇಳಿದ ಆನೆ ಗುಡಾಣದ ಹಾಗೆ ಇದೆ ಎಂದು. ಕಿವಿ ಮುಟ್ಟಿದವ ಒಂದು, ಸೊಂಡಿಲು ಮುಟ್ಟಿದವ ಮತ್ತೊಂದು, ಅವರಲ್ಲೇ ಚರ್ಚೆ ನಡೆದು ಅವರಲ್ಲೇ ಭಿನ್ನಾಭಿಪ್ರಾಯ ಉಂಟಾಯಿತು. ಏಕೆಂದರೆ ಎಲ್ಲರೂ ಆನೆಯ ಜ್ಞಾನ ಪಡೆದಿದ್ದಾರೆ. ಅವರು ಹೇಳುತ್ತಿರುವುದು ಅನುಭವದಿಂದ ಕೂಡಿದೆ. ಆದರೆ ಪೂರ್ಣ ಸತ್ಯವಲ್ಲ. ಅಲ್ಲೇ ಇದ್ದ ಹಿರಿಯರು ಹೇಳಿದರು ನೀವೆಲ್ಲರೂ ಹೇಳುತ್ತಿರುವುದು ಸತ್ಯ ಆದರೆ ಪೂರ್ಣ ಸತ್ಯವಲ್ಲ. ನೀವು ಹೇಳುತ್ತಿರುವುದೆಲ್ಲಾ ಆನೆಯಲ್ಲಿ ಇದೆ .ಅದನ್ನು ಬಿಟ್ಟು ಸಹ ಆನೆ ಇನ್ನೇನೋ ಒಳಗೊಂಡಿದೆ. ಅದೆಲ್ಲಾ ಸೇರಿಸಿದರೆ ಆನೆಯ ಪೂರ್ಣ ಭಾವ ಬರುತ್ತದೆ. ಏಕೆಂದರೆ ನೀವ್ಯಾರೂ ಆನೆಯ ಪೂರ್ಣ ದರ್ಶನ ಮಾಡಿಲ್ಲ. ನಿಮ್ಮದೆಲ್ಲವೂ ಅಲ್ಪ ದರ್ಶನ. ಆನೆಯ ಸ್ವಲ್ಪ ಭಾಗವನ್ನು ಮಾತ್ರ ನೋಡಿ ಅದೇ ಸತ್ಯ ಎಂದು ತಿಳಿದಿದ್ದೀರಿ ಎಂದು ತಿಳಿಸಿ ಹೇಳಿದರು.



ಈ ಜಗತ್ತಿನಲ್ಲಿ ಮನುಷ್ಯರಾದ ನಾವೂ ಸಹ ಹಾಗೆಯೇ ಪೂರ್ಣ ಜ್ಞಾನ ಬಂದರೆ ಮನುಷ್ಯ ಜಗಳವಾಡುವುದಿಲ್ಲ.




ಒಮ್ಮೆ ವಾಚರ್ ಗುಟ್ಟಿಗೂ, ವೆಂಕ್ಟಪ್ಪ ಗಾರ್ಡ್ಗೂ ಬಾರಿ ಮಾತಿನ ಜಗಳ ನಡೆಯುತ್ತಿತ್ತು. “ಏ. . . ಇಲ್ಲ ಬಿಡಿ ಸಾ. .! ಒಂದೇ ಹೊಡ್ದಿದ್ದು” ಎನ್ನುತ್ತಿದ್ದ ಗುಟ್ಟಿ. “ಲೇ ಗುಟ್ಟಿ, ನಿಂಕ ತಿಳಿತದೇನೋ ಅದ್ದೆಲ್ಲ. . .!, ಆ ಸಾಯೇಬ ಅವ್ನಲ್ಲ, ಬೋಳಿಮಗ! ನನ್ನನಾ ಸುಮ್ನೆ ಬಿಡ್ತಾನೇನೋ. . .ನೀನೇನೊ ಒಂದ್ತಾನೆ ಅಂತಿಯಾ!”. “ಏ ಇಲ್ಲ ಸಾ. . .ಆ ಪೀಳೆಕಮ್ಮನಾಣೆ, ನಾನು ಬೇಡ ಬೇಡ ಅಂಥ ಎಷ್ಟೇಳಿದ್ರು ಕೇಳಿಲ್ಲ ಆ ದುರ್ಗ, ಸುಮ್ನೆ ನೋಡ್ಕೋಡ್ತಿನಿ ಅಂತ ತಕೊಂಡೋನು ಒಡ್ದೆ ಬಿಟ್ಟ” ಎಂದು ಇನ್ನೋ ಏನೇನೋ ಜೋರಾಗಿ ಕೂಗಾಡಿ ಮನೆಯ ಒಳಗಡೆ ಅಡುಗೆ ಮಾಡುತ್ತಿದ್ದ ಹೆಂಗಸರೆಲ್ಲ ಬೀದಿಗೆ ಬಂದು ಜಗಳವನ್ನು ನೋಡಿಕೊಂಡು ಆನಂದಿಸುತ್ತಿದ್ದರು. ಆದರೆ ಯಾರಿಗೂ ತಿಳಿದೇ ಇಲ್ಲ “ಒಂದೇ ತಾನೇ. . . ಬಿಡಿ ಸಾರ್. . .” ಎಂಬ ಗುಟ್ಟಿಯ ಗುಟ್ಟಿನ ಮರ್ಮ. “ಹೋಗ್ಲಿ ಬುಡಿ ಸರ್. . . ಏನೋ ತಪ್ಪಾಗ್ಬುಟ್ಟದೆ, ಯಾಕ್ ಹಿಂಗ್ ಜಗಳ ಈಗ” ಎಂದು ಗುಟ್ಟಿಯ ಜೊತೆಯಲ್ಲಿದ್ದ ದುರ್ಗನು ಹೇಳಿದ. ಗಾರ್ಡ್ಗೆ ಇವನ ಮಾತನ್ನು ಕೇಳಿ ಕೋಪ ನೆತ್ತಿಗೇರಿ, “ಏ ನೀನ್ ಯಾವ್ ಬೋಳಿಮಗನೋ ಹೇಳಕ್ಕೆ ನಮ್ಮೂಡುಗ್ರುನಾ ಎಲ್ಲಾ ಹಾಳ ಮಾಡೋದ್ದಲದೆ, ಈಗ ನನ್ನತ್ರ ಮಾತಾಡ್ತಿಯಾ. . .!. ಹೋಗೊ ಹೋಗೊ ಸಾಕು”. ಎಂದು ಗದುರಿ ಕಳಿಸಿದ.

ಸಲ್ಪ ಸಮಯದ ನಂತರ ಜಗಳವೆಲ್ಲ ತಣ್ಣಗಾಗಿ ವೆಂಕ್ಟಪ್ಪ ಗಾರ್ಡು, ಗುಟ್ಟಿ ಎಲ್ಲಾರು ಒಟ್ಟಿಗೆಯೇ ಕಾಡಿನ ಕಡೆ ಹೊರಡುತ್ತಿದ್ದರು, ಜೊತೆಯಲ್ಲಿ ಫಾರೆಸ್ಟ್ ಡೀಪಾರ್ಟ್ಮೆಂಟ್ ನಲ್ಲೇ ಗನ್ ಮ್ಯಾನ್ ಎಂಬ ಬಿರುದು ಪಡೆದುಕೊಂಡಿದ್ದ ಗನ್ ಮ್ಯಾನ್ ಪೆದ್ದಣ್ಣ, ಬಂದೂಕನ್ನು ಹೆಗಲ ಮೇಲೆ ಒತ್ತುಕೊಂಡು ಗಾರ್ಡ್ ವೆಂಕ್ಟಪ್ಪನ ಹಿಂದೆ ನಡೆಯುತ್ತಿದ್ದ. ಗಾರ್ಡ್ ವೆಂಕ್ಟಪ್ಪನು “ನಿಂಗಾದ್ರು ತಿಳಿಯಕ್ಕಿಲ್ಲೇನೋ ಪೆದ್ದಣ್ಣ! ಬಂದೂಕ್ನ ಹೋಗಿ ಹೋಗಿ ಅವ್ನಕೈಗೆ ಕೊಟ್ಟಿದ್ದಿಯಾ” ಎಂದು ಪೆದ್ದಣ್ಣನನ್ನು ಸೇರಿಸಿಕೊಂಡು ಬೈಯುತ್ತಿದ್ದ.



“ನಾನು ಆ ಸಾಹೇಬನಿಗೆ ಬಂದೂಕಿನ ಗುಂಡೆಲ್ಲ ಲೆಕ್ಕಕೊಡ್ಬೇಕು, ನೀವೆನೋ ಒಂದೇ ತಾನೇ. . . ಬಿಡಿ ಸಾರ್. . .ಅಂತಿರಾ,” ಎಂದು ಕೈ ಕೈಯನ್ನು ಇಚುಕಿಕೊಳ್ಳುತ್ತಿದ್ದ. ವೆಂಕ್ಟಪ್ಪನಿಗೆ ಜಗಳದ ಬಿಸಿ ಇನ್ನು ತಣ್ಣಗಾಗದೆ ಬೂದಿ ಮುಚ್ಚಿದ ಕೆಂಡದಂತೆಯೇ ಗುಟ್ಟಿಯನ್ನು ಆಗೀಗ ಒಂದೊಂದು ಮಾತಿನ ಬೈಗುಳಗಳನ್ನು ಉಗುಳುತ್ತ ದಾರಿಯಲ್ಲಿ ನಡೆಯುತ್ತಾ ಹೋಗುತ್ತಿದ್ದರು.

ನಾನು ದಾರಿಯ ಮೊಗ್ಗುಲ್ಲಲ್ಲೇ ಆಳೆತ್ತರಕ್ಕೆ ಬೆಳೆದಿದ್ದ ಲಂಟನದ ಬೇಲಿಯ ಪಕ್ಕದಲ್ಲೇ  ಬೆಳೆದಿರುವ ಮೆಣಸಿನ ಗಿಡಗಳನ್ನು ನೋಡುತ್ತಿದ್ದೆ. ದಾರಿಯಲ್ಲಿ ಯಾರ್ದೋ ಬುಡ್ಸುಗಳ ಬರಬರ ಸದ್ದು ಕೇಳಿಸುತ್ತಿತ್ತು. ಬೇಲಿಯ ಪಕ್ಕದ ನನ್ನ ನೇರಕ್ಕೆ ಬಂದ ಬರಬರ ಶಬ್ಧ ಇದ್ದಕ್ಕಿದ್ದಂತೆ ನಿಂತು, “ನೋಡೋ ಗುಟ್ಟಿ! ಇವತ್ಕಾಯ್ತು. . .! ಇನ್ನೊಂದು ದಿನ ಆ ದುರ್ಗನ ಜೊತೆ ನೋಡ್ದೆ, ನೋಡು ಸರಿ ಇರಕ್ಕಿಲ್ಲ. ಸಾಹೇಬನಿಗೆ ಹೇಳಿ ಕೆಲ್ಸದಿಂದ ತೆಗೆದ್ಬುಡ್ತೀನಿ” ಎಂದಾಗಲೇ ನನಗೆ ತಿಳಿದ್ದಿದ್ದು, ಗಾರ್ಡ್, ವಾಚರ್ ಗುಟ್ಟಿ, ಇಬ್ರೂ ಏನೋ ಮಾತಾಡ್ಕೊಂಡು ಹೋಗುತ್ತಿದ್ದಾರೆ ಎಂದು. ಅವರು ಹೋಗುತ್ತಿದ್ದ ರಬಸಕ್ಕೆ ಯಾಕೆ ಇವರ ಜೊತೆ ಈಗ ಮಾತು, ನಾಳೆ ನೋಡೋಣ ಎಂದು ಮನಸ್ಸಿನಲ್ಲೇ ಅಂದುಕೊಂಡು ದಾರಿಗೆ ಬಂದೆ. ಸುಬ್ಬನ್ ಸಾಬಿಯು ಎದುರಿಗೆ ದೂರದಲ್ಲಿ ಗುಟ್ಟಿ, ಗಾರ್ಡ್, ಪೆದ್ದಣ್ಣನ ಜೊತೆಯಲ್ಲಿ ನಿಂತು ಅದೇನ್ನನ್ನೋ ಮಾತನಾಡುತ್ತಾ ನಿಂತಿದ್ದ.  ಸುಬ್ಬನ್ ಸಾಬಿ ಬರಬಹುದು ಇತ್ತ, ಏನ್ ಸಮಾಚಾರ ಕೇಳೋಣ ಎಂದು ಕಾದುನಿಂತೆ, ಎಷ್ಟೋತ್ತಾದರು ಬರಲೇ ಇಲ್ಲ, ಅಲ್ಲೆ ನಿಂತು ಜೋರಾಗಿ ಮಾತು-ಕತೆ ನಡೆಯುತ್ತಲೇ ಇತ್ತು. ಹಾಳಾಗಿ ಹೋಗ್ಲಿ ಅವ್ನ! ಎಂದು ಮನಸ್ಸಿನಲ್ಲೆ ಶಪಿಸುತ್ತಾ ಅಲ್ಲೆ ಪಕ್ಕದಲ್ಲೇ ಇದ್ದ ಅರಳಿಕಟ್ಟೆಯ ಮೇಲೆ ಕುಳಿತೆ. ಅರ್ಧ ಗಂಟೆಯ ನಂತರ ಅವನೆ ನನ್ನ ಬಳಿ ಬಂದ, “ಏನ್ ಸುಬ್ಬನ್ ಸಮಾಚಾರ! ” ಎಂದು ಕೇಳಿದೆ, “ಏನೂ ಇಲ್ಲ, ಈ ಗುಟ್ಟಿ, ಪೆದ್ದಣ್ಣ ಇಬ್ರುನು ನೆನ್ನೆ ಕಾಡಿಂದ ಬರಬೇಕಾದರೆ ಈ ಪೆದ್ದಣ್ಣ ಅರ್ಜೆಂಟ್ ಎಲ್ಲೋ ಹೋಗ್ಬೇಕಾಗಿತ್ತು, ಇವ್ನ ಹೆಗಲಮೇಲಿದ್ದ ಗನ್ನನ್ನ ಗುಟ್ಟಿ ಕೈಗೆ ಕೊಟ್ಟು ಎದ್ನೋ-ಬಿದ್ನೋ ಅಂತ ಹೊರಟನಂತೆ, ಈ ಗುಟ್ಟಿ,  ಎದುರಿಗೆ ಸಿಕ್ಕ ದುರ್ಗನ ಜೊತೆ ಸೇರ್ಕೊಂಡು, ದುರ್ಗನ ಕೈಗೆ ಗನ್ ಕೊಟ್ಟು. ಇಬ್ರು ಸೇರಿ ಶಿಕಾರಿ ಮಾಡಕೊಗಿದ್ದರಂತೆ. ಅಲ್ಲಿ ಒಂದು ಕಾಡ್ ಹಕ್ಕಿ ಹೊಡೆದ್ರಂತೆ, ಅದ್ಕೆ ಈ ದೊಡ್ಡ ರಂಪರಾಮಣ್ಯ! ಮಾರಾಯ ಎಂದು ಹೇಳಿದ.

ಹೇಗಿದೆ ನೋಡು ಪಾರೆಸ್ಟ್ರಿನವರ ಕತೆ!, ಕಾಡಾಗ ಕಳ್ಳ-ಗಿಳ್ಳ ಬಂದಾಗ ಅಥಾವ ಆನೆ ಏನಾರು ಅಟ್ಟಿಸ್ಕೋ ಬಂದಾಗ ಎಮರ್ಜೆನ್ಸಿಗೆ ಇರ್ಲಿ ಅಂಥ ಗನ್ ಕೊಟ್ರೆ! ಇಂಗ ಮಾಡೋದು. ಡೀಪಾರ್ಟ್ಮೆಂಟ್ ಬಂದೂಕು ಕೆಲ್ಸ ಮುಗಿದ ಮೇಲೆ ನೇರಾ ಅವ್ರ ಮೇಲಧಿಕಾರಿಗೆ ಒಪ್ಪಿಸಿ ಹೋಗ್ಬೇಕು, ಆದ್ರೆ ಈ ಪೆದ್ದಣ್ಣ ಅರ್ಜೆಂಟ್ ಇದ್ದುದ್ದರಿಂದ ಗುಟ್ಟಿಗೆ ಕೊಟ್ಟಿದ್ದು ಒಂದ್ ಪಕ್ಷ ಒಪ್ಕೋ ಬಹುದು, ಆದ್ರೆ ಈ ಗುಟ್ಟಿ ಕಳ್ಳ ಬೇಟೆಮಾಡೊ ಕಳ್ಳರ ಜೊತೆ ಸೇರಿಕೊಂಡು ಶಿಕಾರಿ



ಮಾಡಕೊಂಡು ಮಜಮಾಡಿದ್ದು ತಪ್ಪು. ಗಾರ್ಡ್ ಮಾಡಿದು ಸರಿ! ಆದ್ರೆ ಬರೀ ಮಾತಿನಲ್ಲಿ ಜಗಳ ಮಾಡೋ ಬದಲು ಇಡ್ಕೊಂಡು ನಾಲ್ಕ್ ವದಿಬೇಕಿತ್ತು ಅವ್ನ ಅಂತ ಅನಿಸಿತು. ಯಾವುದೊ ಸಣ್ಣಪುಟ್ಟ ಹಕ್ಕಿ ಹೊಡೆದ್ದಿದ್ದುಕ್ಕೆ ಸರಿಹೋಯ್ತು, ಕಾಡಲ್ಲಿ ಯಾವುದಾದ್ರು ಜಿಂಕೆನೋ-ಹಂದಿನೋ ಹೊಡಿದ್ದಿದ್ರೆ, ನಿಮಗೆಲ್ಲ ಗೊತ್ತಿರಬೇಕು ಗಾದೆಯಿದೆಯಲ್ಲ *’ಬೇಲಿನೇ ಎದ್ದು ಹೊಲ ಮೇಯ್ದಾಂಗೆ’* ಆ ತರ ಆಯ್ತು.

ಸುಬ್ಬನ್? ಯಾವ್ ಹಕ್ಕಿ ಹೊಡೆದ್ದಿದ್ರಂತೆ? ಎಂದು ಕೇಳಿದೆ. ಯಾವುದೋ ಅಂಥ ಸರಿಯಾಗಿ ಗೊತ್ತಿಲ್ಲ, ಅವ್ನಗೂ ಗೊತ್ತಿಲ್ಲ ಬಿಡಿ ಆ ಹಕ್ಕಿ ಹೆಸರು, ಆದ್ರೆ

ನಾನು ಕಾಡುಕೋಳಿ-ಗೀಳಿ ಹೊಡೆದ್ರ ಎಂದೆ. ಅದ್ಕೆ “ಏ. . .ಇಲ್ಲ ಮಾರಾಯ! ಆ ನಮ್ಮ ಫಾರೆಸ್ಟ್ ಗೇಟ್ ಇಲ್ವ? ಅಲ್ಲಿ ಕರೆಂಟ್ ತಂತಿ ಮೇಲೆ ಕುತ್ತಿತ್ತು, ಸಣ್ಣ ಹಕ್ಕಿ!, ಕೋಳಿ ಅಷ್ಟ್ದಪ್ಪ ಇರ್ಲಿಲ್ಲ!, ಇಷ್ಟ್ವಪ್ಪ ಇತ್ತು ಅಂಥ ಅವ್ನ ಬಲಗೈ ಹಸ್ತನಾ ಅಗಲ್ಸಿ ತೋರಿದ” ಎಂದು ಕಣ್ಣುಗಳನ್ನು ಅಗಲಿಸಿ ತೋರಿಸಿದ ಸುಬ್ಬನ್ ಸಾಬಿ. ಮುಖ, ಎದೆ, ಕತ್ತು, ಹೊಟ್ಟೆಯೆಲ್ಲ ಬಿಳಿಬಣ್ಣ, ಕಣ್ಣು ಕೆಂಪಾಗಿತ್ತಂತೆ, ಹದ್ದು ತರ ಕೊಕ್ಕಂತೆ ಎಂದು ವಿವರಿಸಿದ. ಅದೇನೋ ಹೆಸರು ಹೇಳಿದ ಎಂದು ತನ್ನ ತಲೆಯನ್ನು ಕೆರೆದುಕೊಂಡು ನೆನಪು ಮಾಡಿಕೊಳ್ಳುತ್ತಿದ್ದ. ನಾನು ಇತ್ತ ಯಾವ ಹಕ್ಕಿ ಇರಬಹುದು ಎಂದು ಯೋಚಿಸುತ್ತಿದ್ದೆ, ಅಷ್ಟರಲ್ಲಿ “ಏ. . .ಅದೆ ಡ್ಯಾಗೆ” ಅಂತ ಹೇಳ್ದ. ಆದ್ರೆ ಮಾಂಸ ಎಲ್ಲಾ ಬರ್ರಿ ಎಣ್ಣೆ-ತುಪ್ಪನೇ ಇರ್ತದಂತೆ ಎಂದು ತನ್ನ ಬಾಯಿಯನ್ನು ಚಪ್ಪರಿಸಿದ ಸುಬ್ಬನ್ ಸಾಬಿ. ನನಗೂ ಹೊಳೆಯಿತು ಅದು ಡೇಗೆ ಅಲ್ಲ, ಬಿಳಿದೇಹ, ಕೆಂಪುಕಣ್ಣು, ಹದ್ದಿನ ತರ ಕೊಕ್ಕು ಅಂದ್ರೆ ಅದು ಬ್ಯಾಕ್-ಶೋಲ್ಡರ್ಡ್ ಕೈಟ್ ಎಂದು ಗೊತ್ತಾಯಿತು.



ಸಾಮಾನ್ಯವಾಗಿ ಈ ಬ್ಯಾಕ್-ಶೋಲ್ಡರ್ಡ್ ಕೈಟನ್ನು ಕನ್ನಡದಲ್ಲಿ ರಾಮದಾಸ ಹಕ್ಕಿ ಎಂದು ಕರಿತಾರೆ. ಈ ಹಕ್ಕಿ ಸಾಮಾನ್ಯವಾಗಿ ಒಂಟಿಯಾಗಿ ವಿದ್ಯುತ್ ತಂತಿಗಳ ಮೇಲೆ ಕುಳಿತಿರುತ್ತದೆ ಮತ್ತೆ ಆಕಾಶದಲ್ಲಿ ಒಂದೇ ಕಡೆ ರೆಕ್ಕೆ ಬಡಿಯುತ್ತಾ ನಿಂತಿರುವುದ್ದನ್ನು ಗಮನಿಸಬಹುದು. ಇದು ಕೀಟಗಳು, ಇಲಿಗಳನ್ನು ಬೇಟೆಮಾಡುತ್ತದೆ. ಬನ್ನೇರುಘಟ್ಟ, ಬಂಡೀಪುರ, ನಾಗರಹೊಳೆ, ಬಿಳಿಗಿರಿರಂಗನ ಬೆಟ್ಟ ಮುಂತಾದ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಎಲ್ಲಾ ಹದ್ದು ಜಾತಿಯ ಹಕ್ಕಿಗಳು ಗೂಡು ಮಾಡುವಂತೆ ಇದೂ ಸಹ ಹುಲ್ಲು, ಕಡ್ಡಿ ಬೇರುಗಳಿಂದ ಕೂಡಿದ ವೃತ್ತಾಕಾರದ ಗೂಡುಣ್ಣು ಕಟ್ಟಿ, ಹಳದಿ ಮಿಶ್ರಿತ ಬಿಳಿ ಮೊಟ್ಟೆಗಳಿಗೆ ಕಂದು ಚುಕ್ಕಿಗಳಿರುವ ಮೂರು ಅಥವಾ ನಾಲ್ಕು ಮೊಟ್ಟೆಗಳಿಟ್ಟು ಮಾರಿಮಾಡುತ್ತವೆ.

ಒಮ್ಮೆ ದುರ್ಗ ನನ್ನ ಎದುರಿಗೆ ಸಿಕ್ಕಿದ್ದ, ನಮ್ಮನೆ ಹತ್ರ ಮರದಲ್ಲಿ ತೊಲಕ್ಕಿ ಬರ್ತವೆ ರಾತ್ರಿಲಿ ಬಂದ್ರೆ ಬೇಟೆಮಾಡ್ಬೋದು ನೋಡಿ!, ಯಾವ್ ಯಾವ ಹಕ್ಕಿ ಬೇಟೆಮಾಡ್ತಿರಾ? ಅದೇನೇನ್ ಹಕ್ಕಿ ತಿಂತಿರಾ? ಎಂದು ಪುಸಲಾಯಿಸಿದೆ. “ಏ. . ಇಲ್ಲ, ಕಾಡ್ಕೋಳಿ-ಗೀಳಿ!” ಎಂದ. ನಾನು ಬಿಡದೆ ಹದ್ದು-ಗಿದ್ದು ಎಲ್ಲಾ ಹೊಡಿತೀರಂತೆ! ಎಂದೆ. “ಏ. . .ಇಲ್ಲಪ್ಪ ಅದನೆಲ್ಲ ಯಾರ್ ತಿಂತರೆ ಮಾರಾಯ!, ಗಬ್ಬು. . .ಇಲಿ-ಹೆಗ್ಗಣ ಎಲ್ಲ ತಿಂತವೆ! ಅವು”, ಎಂದ. ನನಗೆ ನಗು ಬಂತು. ಈ ಡೇಗೆ ಎಲ್ಲಾ ಇಲಿ-ಹೆಗ್ಗಣ ತಿನ್ನೋದ್ದಿಲೇನೋ? ಎಂದೆ. “ಏ ಎಲ್ಲನಾ ಉಂಟ ಮಾರಾಯ ಅವು ಬರ್ರೀ ಹುಳ-ಉಟ್ಟ್ರೆ ತಿಂತವೆ ಅಷ್ಟೆ” ಎಂದ. ಬಿಟ್ಟರೆ ಕಾಗೆ, ಓತಿಕ್ಯಾತ ಕೂಡ ಬಿಡಲ್ಲ ಬಿಡಿ, ಈ ಜನ ಎಂದುಕೊಂಡು ಸುಮ್ಮನಾದೆ.

ವಿವಿ ಅಂಕಣ

# ವಿದ್ಯಾರ್ಥಿಗಾಗಿ ವಿಜ್ಞಾನ

- ***ಸೋಪಾಕಿ ಕೈ ತೊಳ್ಕೊಳಿ !***

ಮಕ್ಕಳನ್ನು ಮಣ್ಣಿನಲ್ಲಿ ಆಟವಾಡಲು ಬಿಡಿ, ಚಿಕ್ಕ ಮಕ್ಕಳು ಸಗಣಿ-ಕಸ ಬಾಚಲಿ, ಮರಗಿಡಗಳು ಹೆಚ್ಚಿರುವ ಪರಿಸರದಲ್ಲಿ ಮಕ್ಕಳು ಸ್ವಚ್ಛಂದವಾಗಿ ವಿಹರಿಸಲಿ. ಹೀಗೆ ಮಾಡಿದರೆ ಸಾಕು ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಹಲವು ಬ್ಯಾಕ್ಟೀರಿಯಾಗಳ ಸಂಪರ್ಕಕ್ಕೆ ಬಂದು, ಅವರಲ್ಲಿ ರೋಗನಿರೋದಕ ಶಕ್ತಿ ಹೆಚ್ಚಿ, ಮಕ್ಕಳು ಬೆಳೆದು ದೊಡ್ಡವರಾದಾಗ ಯಾವುದೇ ಕಾಯಿಲೆ ಕಸಾಲೇ ಇಲ್ಲದೆ ಆರೋಗ್ಯವಾಗಿ ಬದುಕುತ್ತಾರೆ ಎಂದು ವಿಜ್ಞಾನಿಗಳು ಕಂಡು ಹಿಡಿದ್ದಿದ್ದಾರೆ.



ಬ್ಯಾಕ್ಟೀರಿಯಗಳಲ್ಲೂ ಕೆಲವು ನಮಗೆ ಉಪಯುಕ್ತವಾದ ಬ್ಯಾಕ್ಟೀರಿಯಗಳು ಇವೆ. ನಮ್ಮ ದೇಹವನ್ನೇ ತೆಗೆದುಕೊಂಡರೂ ಚರ್ಮದ ಮೇಲೆ ನಮ್ಮ ಒಂದು ಜೀವಕೋಶಕ್ಕೆ ಹತ್ತರ ಪಟ್ಟು ಬ್ಯಾಕ್ಟೀರಿಯಗಳಿವೆ. ಇವು ಹಾನಿಕಾರಕವಲ್ಲದ ಬ್ಯಾಕ್ಟೀರಿಯಗಳು. ಇವು ಇಷ್ಟು ಸಂಖ್ಯೆಯಲ್ಲಿ ಇರುವುದರಿಂದಲೇ ಯಾವುದಾದರೂ ಹಾನಿಕಾರಕ ಬ್ಯಾಕ್ಟೀರಿಯಗಳು ಅಲ್ಲಿಗೆ ಬಂದರೂ ನಮಗೆ ಕಾಯಿಲೆ ಬರುವುದಿಲ್ಲ. ನಮ್ಮ ಕರುಳಿನಲ್ಲಿ, ಹೊಟ್ಟೆಯಲ್ಲಿ ಹತ್ತು ಸಾವಿರ ಜಾತಿಯ ಬ್ಯಾಕ್ಟೀರಿಯಗಳಿವೆ ಜಾಗ ಕೊಟ್ಟಿದ್ದೇವೆ. ಕರುಳಿನಲ್ಲಿರುವ ಬ್ಯಾಕ್ಟೀರಿಯಗಳು ವಿಟಮಿನ್- ಕೆ ತಯಾರಿಸುತ್ತವೆ ಮತ್ತೆ ನಾವು ತಿಂದ ಆಹಾರ ಜೀರ್ಣವಾಗಲು ಸಹಾಯವಾಗುತ್ತವೆ. ಕೆಲವು ಬ್ಯಾಕ್ಟೀರಿಯಗಳು ನಮ್ಮ ರೋಗನಿರೋದಕ ಶಕ್ತಿಯನ್ನು ಹೆಚ್ಚಿಸಿ ಅದು ದಕ್ಷತೆಯಿಂದ ಕೆಲಸ ಮಾಡುವಂತೆ ದೇಹವನ್ನು ಟ್ರೈನ್ ಮಾಡುತ್ತವೆ. ಈ ರೀತಿ ಟ್ರೈನ್ ಆಗದೇ ಇದ್ದಲ್ಲಿ ದೇಹವು ಅಸ್ತಮದಂತಹ ರೋಗಗಳಿಗೆ ತುತ್ತಾಗುವ ಸಂಭವವಿರುತ್ತದೆ ಎಂದು ಜರ್ಮನಿಯ ಇರೀಕಾ ಎಂಬ ವಿಜ್ಞಾನಿಯು ಹಸುಕೊಟ್ಟಿಗೆಗಳಲ್ಲಿ ಕೆಲಸ ಮಾಡುವ ಮಕ್ಕಳಗೆ ಅಸ್ತಮದಂತಹ ರೋಗಗಳು ಬರುವ ಸಂಬವ ಕಡಿಮೆ ಎಂದು ಅಂಕಿ ಅಂಶಗಳೊಂದಿಗೆ ಋಜುವಾತು ಪಡಿಸಿದ್ದಾರೆ.



ನಿಮ್ಮ ಮನೆಯಲ್ಲಿ ದನದ ಕೊಟ್ಟಿಗೆ ಇಲ್ಲವೇ ಚಿಂತೆ ಪಡಬೇಡಿ, ನಿಮ್ಮ ಮಕ್ಕಳನ್ನು ಹೆಚ್ಚು ಗಿಡ ಮರಗಳಿರುವಲ್ಲಿ ಓಡಾಡಿಕೊಂಡು ಬಂದರೆ ಸಾಕು, ಎಷ್ಟೋ ಕಾಯಿಲೆಗಳು ಬರುವುದಿಲ್ಲ ಎನ್ನುತ್ತಿದ್ದಾರೆ ವಿಜ್ಞಾನಿಗಳು. ಗಿಡಮರಗಳ ಜೀವ ವೈವಿಧ್ಯ ಹೆಚ್ಚಿರುವ ಕಡೆಗಳಲ್ಲಿ ಜೀವಿಸುತ್ತಿರುವ ಮಕ್ಕಳ ಚರ್ಮದ ಮೇಲೆ ಬಹು ವಿಧ ವಿಧವಾದ ಬ್ಯಾಕ್ಟೀರಿಯ ಕಂಡುಬಂದಿವೆ. ಈ ತರಾವರಿ ಬ್ಯಾಕ್ಟೀರಿಯಗಳು ಅವರಿಗೆ ರೋಗ ಬರಿಸದಿದ್ದರೂ ರೋಗ ಬರಿಸುವ ಬ್ಯಾಕ್ಟೀರಿಯಗಳ ವಿರುದ್ಧ ಹೋರಾಡಲು ಬೇಕಾಗುವ ಆಂಟೀಬಾಡಿಗಳನ್ನು ದೇಹವೇ ತಯಾರಿಸುಕೊಳ್ಳುವಂತೆ ಮಾಡಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ಪಿನ್ ಲ್ಯಾಂಡಿನ ಹಂಸ್ಕಿ ಎಲ್ಕಾ ಕಂಡುಹಿಡಿದ್ದಾರೆ. ನಮ್ಮ ಸುತ್ತ ಮುತ್ತ ಇರುವ ಎಲ್ಲಾ ಬ್ಯಾಕ್ಟೀರಿಯಾಗಳು ಕೆಟ್ಟವಲ್ಲ, ಅವುಗಳಲ್ಲಿ ಹಲವು ಬ್ಯಾಕ್ಟೀರಿಯಗಳು ನಾವು ಆರೋಗ್ಯದಿಂದಿರಲು ಸಹಾಯಕವಾಗಿವೆ. ಜಾಹೀರಾತುಗಳಲ್ಲಿ ತೋರಿಸುವಂತೆ ಎಲ್ಲಾ ಬ್ಯಾಕ್ಟೀರಿಯಗಳನ್ನು ಕೊಳ್ಳುವ ಸಾಬೂನುಗಳನ್ನು ಬಳಸಬೇಕಿಲ್ಲ. ಮಕ್ಕಳನ್ನು ಮಣ್ಣಿನಲ್ಲಿ ಆಟವಾಡಲು ಬಿಡಿ, ದನಕರುಗಳು ಇರುವ ಕೊಟ್ಟಿಗೆಯಲ್ಲಿ ಮಕ್ಕಳು ಕಸ ಗುಡಿಸಲಿ, ಹೆಚ್ಚೆಚ್ಚು ಮರಗಿಡಗಳಿರುವ ಕಾಡಿನಲ್ಲಿ ಉದ್ಯಾನವನಗಳಲ್ಲಿ ಮಕ್ಕಳು ಓಡಾಡಲಿ, ಆಟವಾಡಲಿ. ಕೊನೆಯಲ್ಲಿ ಬಿಸಿನೀರಿನಲ್ಲಿ ಸಾಧಾರಣ ಸಾಬೂನು ಬಳಸಿ ಕೈಕಾಲು ತೊಳೆದು ಕೊಂಡರೂ ಸಾಕು ಎನ್ನುತ್ತಿದೆ ವಿಜ್ಞಾನಲೋಕ. ಇತ್ತ ಮಗುವನ್ನು ಮನೆಯಿಂದ ಹೊರಗೆ ಬಿಡದೆ ನಾಜೂಕಾಗಿ ಸಾಕುತ್ತಿರುವ ಸೊಸೆಗೆ "*ಕ್ವಾಣೆ ಮಗ ಕೊಳ್ತೋಯ್ತು, ಬೀದಿ ಮಗ ಬೆಳ್ದೋಯ್ತು*" ಬಿಡಮ್ಮ ಮಗು ಆಡಿ ಬರಲಿ ಬಯಲಲ್ಲಿ ಎಂದು ಬುದ್ದಿವಾದ ಹೇಳುತ್ತಾ ಬಂದಿದ್ದಾಳೆ ಅವಳ ಅತ್ತೆ.





# ಗೀಜಿಗನ ಗೂಡು

ಗೀಜುಗನ ಗೂಡು
ಹಿತ್ತಲ ಮರದಲಿ
ನದಿ ತೊರೆಯ ದಂಡೆಯಲಿ
ಗೀಜುಗನ ಗೂಡು ಗೀಜುಗನ ಗೂಡು

ಹಸಿರೆಲೆಯ ಸೀಳಿ
ನಯವಾಗಿ ಹೆಣೆದಿಹ
ಸೊಗಸಾದ ಗೂಡು ಗೀಜುಗನ ಗೂಡು

ಮಳೆನೀರು ಸೋರದಂತೆ
ಬಿಸಿಲ ತಾಪ ತಾಗದಂತೆ
ಸೊಗಸಾಗಿ ಕಟ್ಟಿರುವ ಗೀಜುಗನ ಗೂಡು

ಸುಭದ್ರ ಸುಂದರ
ಸುಸ್ಥಿರ ಮನೋಹರ
ಸುರಕ್ಷಾ ಗೀಜುಗನ ಗೂಡು

ಹೆಣ್ಣಕ್ಕಿಯ ಮೆಚ್ಚಿಸಲು
ತಕ ಥೈ ನೃತ್ಯ ಮಾಡುವ ಗಂಡಕ್ಕಿ
ಕಟ್ಟಿದ ಗೀಜುಗನ ಗೂಡು

- ಕೃಷ್ಣನಾಯಕ್

